www.vijaykarnataka.com ವಿಜಯ ಕರ್ನಾಟಕ 18/02/14

### ವಾಹನ, ವಿದ್ಯುತ್, ಬ್ಯಾಂಕಿಂಗ್ ಮತ್ತು ಔಷಧ ವಲಯದ ಷೇರುಗಳಿಗೆ ಭಾರಿ ಲಾಭ

# ಷೇರು ಸೂಚ್ಯಂಕ 97 ಅಂಕಗಳ ಚೇತರಿಕೆ

■ ಪಿಟಿಐ ಮುಂಬಯಿ

ಕಾಂಗ್ರೆಸ್ ಬಜೆಟ್ ಎಂದರೆ ಷೇರುಪೇಟೆಗೆ ಅಷ್ಟಕ್ಕಷ್ಟೆ. ಸಾಮಾನ್ಯವಾಗಿ ಬಜೆಟ್ ದಿನ ಷೇರುಪೇಟೆ ಭಾರಿ ಏರಿಳಿತಗಳಿಗೆ ಕಾರಣವಾಗುವುದು ವಾಡಿಕೆ. ಆದರೆ ಈ ಬಾರಿ ಚಿದು ಮಧ್ಯಾಂತರ ಬಜೆಟ್ ಪ್ರಸ್ತಾವನೆಗಳಿಗೆ ಮಾರುಕಟ್ಟೆ ಸಕಾರಾತ್ಮ ಕವಾಗಿ ಸ್ಪಂದಿಸಿದೆ. ತೆರಿಗೆ ವಿನಾಯಿತಿ ಪ್ರಸ್ತಾವನೆಗಳಿಗೆ ಉತ್ತೇಜಿತವಾದ ಮುಂಬಯಿ ಷೇರು ಮಾರುಕಟ್ಟೆ, 97 ಅಂಕಗಳ ಚೇತರಿಕೆ ದಾಖಲಿಸಿ, 20,464.06ರಲ್ಲಿ ವಹಿವಾಟು ಮುಗಿಸಿದೆ.

ಈ ವರ್ಷ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ.4.6ಕ್ಕೆ ತಗ್ಗಿಸಲಾಗುವುದು. ಚಾಲ್ತಿ ಖಾತೆ ಕೊರತೆಯನ್ನು 45 ಶತಕೋಟಿ ಡಾಲರ್‌ಗೆ ನಿಯಂತ್ರಿಸಲಾಗುವುದು ಎಂಬ ಹಣಕಾಸು ಸಚಿವರ ಹೇಳಿಕೆಗೆ ಹೂಡಿಕೆದಾರರು ಹರ್ಷಚಿತ್ತರಾಗಿದ್ದೇ ಮಾರುಕಟ್ಟೆ ಚೇತರಿಕೆಗೆ ಕಾರಣ.

ಬ್ಯಾಂಕಿಂಗ್, ವಾಹನ, ವಿದ್ಯುತ್, ಮತ್ತು ಫಾರ್ಮ ವಲಯದ ಷೇರುಗಳಿಗೆ ಉತ್ತಮ ಖರೀದಿ ಬೆಂಬಲ ದೊರೆತ ಪರಿಣಾಮವಾಗಿ ಈ ವಲಯದ ಷೇರುಗಳು ಉತ್ತಮ ಗಳಿಕೆ ಮಾಡಿಕೊಂಡಿವೆ. ಆದರೆ, ರಿಯಾಲ್ಟಿ, ಗ್ರಾಹಕ ಬಳಕೆ ಬಾಳುವ ಸರಕು ಮತ್ತು ಲೋಹ ವಲಯದ ಷೇರುಗಳು ಲಾಭ ನಿಷ್ಕರ್ಷೆಗೆ ಸಿಲುಕಿ ತೀವ್ರ ನಷ್ಟ ಅನುಭವಿಸಿವೆ. 12 ಬಿಎಸ್ಇ ವಲಯವಾರು ಷೇರುಗಳ ಪೈಕಿ ಏಳು ಷೇರುಗಳು ಚೇತರಿಕೆ ದಾಖಲಿಸಿವೆ. ದಿನದ ವಹಿವಾಟಿನಲ್ಲಿ ಬಿಎಸ್ಇ-30 ಷೇರು ಸೂಚ್ಯಂಕ 150 ಅಂಕಗಳ ಏರಿಕೆ ಕಂಡು ದಿನದ ಅಂತ್ಯದಲ್ಲಿ 79 ಅಂಕಗಳ ಚೇತರಿಕೆ ದಾಖಲಿಸಿತು.



ಕೇಂದ್ರ ಹಣಕಾಸು ಸಚಿವ ಪಿ. ಚಿದಂಬರಂ ಸೋಮವಾರ ಸಂಸತ್ತಿನಲ್ಲಿ ಮಧ್ಯಂತರ ಬಜೆಟ್ ಮಂಡಿಸಿದ ಬಳಿಕ ಕೋಲ್ಕೊತಾ ಷೇರು ಮಾರುಕಟ್ಟೆಯಲ್ಲಿ ಬ್ರೋಕರ್‌ಗಳು ಬ್ಯುಸಿ ವಹಿವಾಟಿನಲ್ಲಿ ನಿರತರಾಗಿದ್ದ ದೃಶ್ಯ.

ಟಾಟಾ ಪವರ್, ಎಂ ಅಂಡ್ ಎಂ, ಡಾ. ರೆಡ್ಡೀಸ್ ಮತ್ತು ಐಸಿಐಸಿಐ ಬ್ಯಾಂಕ್ ನೇತೃತ್ವದಲ್ಲಿ 20 ಷೇರುಗಳು ಗಳಿಕೆಯ ಹಾದಿ ಹಿಡಿದಿವೆ. ಆದರೆ, ಹಿಂಡಾಲ್ಕೊ, ಕೋಲ್ ಇಂಡಿಯಾ ಮತ್ತು ರಿಲಯನ್ಸ್ ನೇತೃತ್ವದಲ್ಲಿ 10 ಷೇರುಗಳು ನಷ್ಟ ಅನುಭವಿಸಿವೆ.

ರಾಷ್ಟ್ರೀಯ ಷೇರು ಸೂಚ್ಯಂಕ 'ನಿಫ್ಟಿ' ಸಹ 24.95 ಅಂಕಗಳ ಏರಿಕೆಯೊಂದಿಗೆ 6,07 3.30ಯಲ್ಲಿ ವಹಿವಾಟು ಮುಗಿದಿದೆ.

ಯುರೋಪ್, ಫ್ರಾನ್ಸ್, ಜರ್ಮನಿ ಸೇರಿದಂತೆ ಬಹುತೇಕ ಜಾಗತಿಕ ಷೇರು ಮಾರುಕಟ್ಟೆಗಳು ಚೇತರಿಕೆ ಕಂಡಿರುವುದು ಭಾರತೀಯ ಷೇರು ಮಾರುಕಟ್ಟೆಯ ಚೇತರಿಕೆಗೆ ಮತ್ತೊಂದು ಕಾರಣ.

ಟಾಟಾ ಪವರ್ ಶೇ.4.81, ಎಂಅಂಡ್ಎಂ ಶೇ.2.83, ಡಾ. ರೆಡ್ಡೀಸ್ ಲ್ಯಾಬ್ ಶೇ.2.45, ಐಸಿಐಸಿಐ ಬ್ಯಾಂಕ್ ಶೇ.2.13, ಹೀರೊ ಮೋಟೊಕಾರ್ಪ್ ಶೇ.1.99, ಮಾರುತಿ ಸುಜುಕಿ ಶೇ.1.38 ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳು ಶೇ.1.37ರಷ್ಟು ಚೇತರಿಕೆ ದಾಖಲಿಸಿವೆ.

ಆದರೆ, ಕೋಲ್ ಇಂಡಿಯಾ ಶೇ.1.59, ಹಿಂಡಾಲ್ಕೊ ಶೇ.1.35 ಮತ್ತು ರಿಲಯನ್ಸ್ ಶೇ.1.22ರಷ್ಟು ನಷ್ಟ ಅನುಭವಿಸಿವೆ.

18/02/14 Hosa Digantha



### ಯಾವ ಕ್ಷೇತ್ರಕ್ಕೆ ಎಷ್ಟು (ಕೋಟಿ ರೂ.ಗಳಲ್ಲಿ)

| | 2012-13 ವಾಸ್ತವ | 2013-14 ಆಯವ್ಯಯ ಅಂದಾಜು | 2013-14 ಪರಿಷ್ಕೃತ ಅಂದಾಜು | 2014-15 ಆಯವ್ಯಯ ಅಂದಾಜು |
|---|---|---|---|---|
| ಕೃಷಿ | 17030 | 18781 | 17557 | 9987 |
| ಗ್ರಾಮೀಣಾಭಿವೃದ್ಧಿ | 44448 | 56438 | 50646 | 2902 |
| ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 439 | 1200 | 464 | 1444 |
| ಇಂಧನ | 132146 | 158287 | 178776 | 163434 |
| ಕೈಗಾರಿಕೆ ಮತ್ತು ಖನಿಜ | 33202 | 48010 | 36167 | 38604 |
| ಸಾರಿಗೆ | 90518 | 133488 | 109029 | 111031 |
| ಸಂವಹನ | 6289 | 12380 | 9333 | 13020 |
| ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 12048 | 17587 | 13575 | 17420 |
| ಸಾಮಾನ್ಯ ಆರ್ಥಿಕ ಸೇವೆಗಳು | 20218 | 31602 | 26878 | 24184 |
| ಸಾಮಾಜಿಕ ಸೇವೆಗಳು | 136436 | 193043 | 164393 | 75109 |
| ಸಾಮಾನ್ಯ ಸೇವೆಗಳು | 5702 | 9307 | 7316 | 7799 |
| ಒಟ್ಟು ಮೊತ್ತ | 498476 | 680123 | 614134 | 464934 |

ವಿಜಯ ಕರ್ನಾಟಕ 18/02



12/02/14 Hosa Digantha

# ನಿವೃತ್ತ ಯೋಧರಿಗೆ 1 ಶ್ರೇಣಿ 1 ಪಿಂಚಣಿ, 9 ಲಕ್ಷ ವಿದ್ಯಾರ್ಥಿಗಳ ಸಾಲಕ್ಕೆ ಸಬ್ಸಿಡಿ

**ಅಂತರ್ಜಾಲ ವರದಿ: ಹೊಸದಿಲ್ಲಿ, ಫೆ.17**

ಯುಪಿಎ ಸರ್ಕಾರದ ಕೊನೆಯ ಮುಂಗಡಪತ್ರ ಮಂಡಿಸಿದ ಹಣಕಾಸು ಮಂತ್ರಿ ಪಿ.ಚಿದಂಬರಂ, ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಸಾಧಿಸಿದ ಆರ್ಥಿಕ ಪ್ರಗತಿ ಅಪೂರ್ವ ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದಾರೆ !

ಕಾರು, ಮೊಬೈಲ್ ಮತ್ತು ಸಾಬೂನು ಮೇಲಿನ ಸುಂಕವನ್ನು ರದ್ದುಗೊಳಿಸುವ ಹಾಗೂ ಹೊಸ ತೆರಿಗೆಯಿಂದ ಸಾಮಾನ್ಯನಿಗೆ ಹೊರೆಯಾಗದ ವಿತ್ತಮಂತ್ರಿ ಮಂಡಿಸಿದ ಬಜೆಟ್ ಚಿತ್ತವೀಗ ಚುನಾವಣೆ ಕಡೆ ನೆಟ್ಟಿದೆ.

**ಮತಬ್ಯಾಂಕಿಗೆ ಲಗ್ಗೆ!**

ಯುವಜನತೆ, ಮಹಿಳೆಯರು ಮತ್ತು ಅಲ್ಪಸಂಖ್ಯಾತರನ್ನು ಕಾಂಗ್ರೆಸ್ ನತ್ತ ಸೆಳೆಯುವ ಸ್ಪಷ್ಟ ಸಂಕೇತ ಈ ಮುಂಗಡಪತ್ರದಲ್ಲಿ ಗೋಚರಿಸುತ್ತಿದೆ. ಈ ವರ್ಗಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಯುಪಿಎ ಸರ್ಕಾರ ಮತಬ್ಯಾಂಕಿಗೆ ಕೈ ಹಾಕಿದೆ. ಅಲ್ಲದೆ ಕಳೆದ ಇದು ಜನಪ್ರಿಯವೂ ಅಲ್ಲ-ಬಹುಮತವಿರುವ ಸರ್ಕಾರದ ಪ್ರಚಾರದ ಸಂಕೇತವೂ ಅಲ್ಲ ಎಂದು ಚಿದಂಬರಂ ಸದನದಲ್ಲಿ ಹೇಳಿದ್ದರೂ ಇದು ಚುನಾವಣೆ ಮುಂಗಡಪತ್ರವಾಗಿಯೇ ದೇಶದ ಜನತೆಯ ಕಣ್ ಮುಂದೆ ಕಾಣುವಂತಾಗಿದೆ.



ಮುಂದಿನ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಲೇಖಾನುದಾನ ಮುಂಗಡಪತವನ್ನು ಲೋಕಸಭೆಯಲ್ಲಿ ಮಂಡಿಸಿದರು. ದೇಶದ ಆಹಾರ ಉತ್ಪಾದನೆ, ಕೈಗಾರಿಕೆ, ಬಂಡವಾಳ ಹೂಡಿಕೆ , ಮೂಲಭೂತ ಸೌಕರ್ಯದಲ್ಲಿ ಯುಪಿಎ ಸರ್ಕಾರ ಹತ್ತು ವರ್ಷಗಳಲ್ಲಿ ಮಾಡಿರುವ ಸಾಧನೆ ಅಮೋಘ ಮತ್ತು ಅಪೂರ್ವ ಎನ್ನುವ ಮೂಲಕ ದೇಶದ ಸಂಸತ್ ನಿಂದಲೇ ಕಾಂಗ್ರೆಸ್ ಪರವಾಗಿ ಚಿದಂಬರಂ ಚುನಾವಣೆ ಪ್ರಚಾರದ ಕಹಳೆ ಊದಿದರು.

**ವಿತ್ತೀಯ ಕೊರತೆ ಇಳಿಕೆ**

ಕಳೆದ ಎರಡು ವರ್ಷಗಳಿಂದ ದೇಶದ ಆರ್ಥಿಕ ಪರಿಸ್ಥಿತಿ ಸ್ಥಿರವಾಗಿದ್ದು, ವಿತ್ತೀಯ ಕೊರತೆಯೂ ಕೂಡಾ ಇಳಿಮುಖವಾಗಿದೆ. ಅಲ್ಲದೆ ಹಣದುಬ್ಬರ ಸಮತೋಲನದಲ್ಲಿದ್ದು, ದೇಶಿಯ ಸರಕುಗಳ ರಫ್ತು ಪ್ರಮಾಣ ಅಧಿಕಗೊಂಡಿದೆ. ಮಿಗಿಲಾಗಿ ಕಳೆದ ಒಂದು ದಶಕದ ಅವಧಿಯಲ್ಲಿ ಒಟ್ಟು 263 ದಶಲಕ್ಷ ಟನ್ ಆಹಾರಧಾನ್ಯ ಉತ್ಪಾದನೆಯಾಗಿದೆ. ಕಲ್ಲಿದ್ದಲು ಹಾಗೂ ಇಂಧನ ಉತ್ಪಾದನೆಯಲ್ಲಿಯೂ ದೇಶ ಪ್ರಗತಿಕಂಡಿದ್ದು, ರಸ್ತೆಗಳ ನಿರ್ಮಾಣದಲ್ಲಿ ಕ್ರಾಂತಿಕಾರಕ ಕೆಲಸವಾಗಿದೆ. ಇದು ಸರ್ಕಾರದ ಆರ್ಥಿಕ ಪ್ರಗತಿಯ ಸಂಕೇತ ಎಂದು ಚಿದಂಬರಂ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮುಂದಿನ ಹಣಕಾಸು ಸಾಲಿನಲ್ಲಿ ವಿತ್ತೀಯ ಕೊರತೆ ಶೇ 4.1ಕ್ಕೆ ಇಳಿಸಲು ಉದ್ದೇಶಿಸಲಾಗಿದೆ. ಮುಂದಿನ ದಿನಗಳಲ್ಲಿ ಇದರ ಪ್ರಮಾಣ ಶೇ. 4ಕ್ಕಿಂತಲೂ ಕಡಿಮೆ ಇರಬೇಕೆಂಬುದು ಗುರಿ. ಯೋಜನಾ ವೆಚ್ಚವಾಗಿ 555822 ಕೋಟಿ ಹಾಗೂ ಯೋಜನೇತರ ವೆಚ್ಚವಾಗಿ 1 7892 ಕೋಟಿ ರೂಪಾಯಿ ಬಳಸಲು ಉದ್ದೇಶಿಸಲಾಗಿದೆ. ಯೋಜನೇತರ ವೆಚ್ಚದಲ್ಲಿ ಇಂಧನ ಸಬ್ಸಿಡಿ ಬಾಬ್ತಿಗಾಗಿ 2,46,397 ಕೋಟಿ ರೂಪಾಯಿ ಖರ್ಚಾಗಲಿದೆ.

ಸಮತೋಲನ ಆರ್ಥಿಕ ಚಿಂತನೆ ಮತ್ತು ಕಾರ್ಯಯೋಜನೆಗಳ ಅನುಷ್ಠಾನದಿಂದ ದೇಶದ ಹಣಕಾಸಿನ ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ಚಿದಂಬರಂ ಕೇಂದ್ರದ ಪ್ರಸಕ್ತ ಆರ್ಥಿಕ ನೀತಿಯನ್ನು ಬಲವಾಗಿ ಸಮರ್ಥಿಸಿ ಕೊಂಡಿದ್ದಾರೆ. ಆಟೋಮೊಬೈಲ್ ವಲಯದ ವ್ಯಾಪ್ತಿಗೊಳಪಡುವ ಕಾರು, ಬೈಕ್ ಮೊದಲಾದ ವಸ್ತುಗಳ ಮೇಲಿನ ಎಕ್ಸೈಸ್ ವನ್ನು ರದ್ದುಗೊಳಿಸಲು ವಿತ್ತಮಂತ್ರಿ ಮುಂದಾಗಿದ್ದಾರೆ. ಇದರಿಂದ ದೇಶದಲ್ಲಿ ಇನ್ನು ಮುಂದೆ ಕಾರು ಮತ್ತು ದ್ವಿಚಕ್ರವಾಹನಗಳ ಮಾರುಕಟ್ಟೆ ಬೆಲೆ ಇಳಿಮುಖವಾಗಲಿದೆ.

ಪುಟ 9

Hosa Digantha. 18/02/14

# ಯುಪಿಎ ಬಜೆಟ್ ಸ್ಪ್ರೇ

ಪುಟ 1ರಿಂದ ಕಾರು ಮತ್ತು ಬೈಕ್ ಪ್ರಿಯರ ವಾಹನ ಖರೀದಿಗೆ ಇದು ಸಂತಸಕರ ಸಂಗತಿಯಾಗಿದೆ. ದೇಶದ ಧನಿಕರ ಮೇಲೆ ವಿಧಿತ ಶೇ.1ರ ಸರ್ ಚಾರ್ಜ್ ಮತ್ತು ಕಾರ್ಪೋರೆಟ್ ವಲಯದ ಮೇಲಿನ ಶೇ.5 ತೆರಿಗೆ ಕುರಿತು ಪ್ರಸಕ್ತ ಮುಂಗಡಪತ್ರದಲ್ಲಿ ಯಾವುದೆ ಪರಿಷ್ಕೃತ ಪ್ರಸ್ತಾವನೆಗಳಿಲ್ಲ, ಅಲ್ಲದೆ ಮೊಬೈಲ್ ಮತ್ತು ಹ್ಯಾಂಡ್ ಸೆಟ್ ಗಳ ಮೇಲಿನ ಕೆಲ ಸುಂಕವನ್ನೂ ಕೈಬಿಡಲಾಗಿದೆ.

**ನಿರ್ಭಯ ನಿಧಿಗೆ 1000 ಕೋಟಿ ರೂ.**

ಕಳೆದ ವರ್ಷ ಜಾರಿಗೆ ಬಂದ ನಿರ್ಭಯ ನಿಧಿಗೆ ಪ್ರಸಕ್ತ ಸಾಲಿನಲ್ಲಿ ಕೂಡಾ 1000 ಕೋಟಿ ರೂಪಾಯಿ ಅನುದಾನ ಮತ್ತು ದೇಶದ ಒಂಬತ್ತು ಲಕ್ಷ ಮಂದಿ ವಿದ್ಯಾರ್ಥಿಗಳಿಗೆ ನೆರವಾಗಲಿರುವ ಶೈಕ್ಷಣಿಕ ಸಾಲದ ಮೇಲಿನ ಬಡ್ಡಿಯನ್ನು ಕಡಿತಗೊಳಿಸಲಾಗಿದೆ. ಈ ಸಂಬಂಧ ದೇಶದ ಪ್ರಮುಖ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಒಟ್ಟು 2,600 ಕೋಟಿ ರೂಪಾಯಿ ಅನುದಾನ ನೀಡಲು ಸರ್ಕಾರ ಮುಂದಾಗಿದೆ. ದೇಶದ ರಕ್ಷಣಾ ಇಲಾಖೆಗೆ ಈ ಸಾರಿ ಕೂಡಾ 2,24,000 ಕೋಟಿ ರೂಪಾಯಿ ಅನುದಾನ ದೊರೆತಿದೆ.

ದೇಶದಲ್ಲಿ 17 ನೂತನ ವಿಮಾನ ನಿಲ್ದಾಣಗಳ ನಿರ್ಮಾಣ, 8 ರಾಷ್ಟ್ರೀಯ ಹೂಡಿಕೆ ಮತ್ತು ಉತ್ಪಾದನೆ ಘಟಕಗಳ ನಿರ್ಮಾಣವಲ್ಲದೆ, ರಸ್ತೆ, ರೈಲುಮಾರ್ಗಗಳ ಮೇಲ್ದರ್ಜೆಯಲ್ಲದೆ 19 ಕಡೆ ತೈಲ ಮತ್ತು ಅನಿಲ ಸಂಪನ್ಮೂಲ ಘಟಕ ಸ್ಥಾಪನೆಗೆ ಮುಂಗಡಪತ್ರದಲ್ಲಿ ಒತ್ತು ದೊರೆತಿದೆ.

**ಆಧಾರ್ ಗೆ ಬದ್ಧ**

ವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದಂತೆ ಕಳೆದ ಒಂದು ದಶಕದ ಅವಧಿಯಲ್ಲಿ 2,34, 600 ಮೆ.ವಾ ವಿದ್ಯುತ್ ಉತ್ಪಾದನೆಯಾಗಿದೆ . ಅಲ್ಲದೆ ದೇಶದ ಒಂದುನೂರಕ್ಕೂ ಅಧಿಕ ಯೋಜನೆಗಳಿಗೆ ಸರ್ಕಾರ ಒಪ್ಪಿಗೆ ನೀಡಿದೆ. ಯುಪಿಎ ಸರ್ಕಾರದ ಮುಕ್ತ ಆರ್ಥಿಕ ಚಿಂತನೆಯಿಂದ ವಿದೇಶಿ ಬಂಡವಾಳ ಹೂಡಿಕೆಗೂ ಅನುಕೂಲವಾಯಿತು . ಅಲ್ಲದೆ ದೇಶಿಯ ಸರಕು ರಫ್ತು ಪ್ರಮಾಣದಲ್ಲಿಯೂ ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡು ಬಂದಿದ್ದು ಇದು ಬೆಳವಣಿಗೆಯ ಸಕಾರಾತ್ಮಕ ನೋಟ ಎಂದರು. ಅಡುಗೆ ಅನಿಲ ಸಬ್ಸಿಡಿ ಸಂಬಂಧ ಸರ್ಕಾರ ಘೋಷಿಸಿರುವ ಆಧಾರ್ ಪದ್ಧತಿಗೆ ಸರ್ಕಾರ ಬದ್ಧ. ಇದರಿಂದ ದೇಶದ ಕೋಟ್ಯಂತರ ಕುಟುಂಬಗಳಿಗೆ ಸಬ್ಸಿಡಿ ದೊರೆಯಲು ಸಹಾಯಕವಾಗಲಿದೆ ಎಂದು ಚಿದಂಬರಂ ಹೇಳಿದ್ದಾರೆ.

Udayvani, 18/2/14

# 'ಬೃಹತ್' ಬಜೆಟ್ ಬಗ್ಗೆ ಜನರೇನಂತಾರೆ ?

ಬೆಂಗಳೂರು: ಬಿಬಿಎಂಪಿ ಬಜೆಟ್ ಬಗ್ಗೆ ಸಾರ್ವಜನಿಕರು ಮಿಶ್ರಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಜಲಮಂಡಳಿ, ಬಿಡಿಎ, ಬಿಎಂಟಿಸಿ, ಬೆಸ್ಕಾಂ ನಡುವೆ ಸಮನ್ವಯತೆ ಸಾಧಿಸಲು ಸಮನ್ವಯ ಸಮಿತಿ ರಚಿಸಲಾಗಿದೆ. ಆದರೆ, ರಸ್ತೆಗೆ ಡಾಂಬರು ಹಾಕಿದ ಮೂರು ತಿಂಗಳೊಳಗೆ ಬೆಸ್ಕಾಂ ಅಥವಾ ಜಲಮಂಡಳಿ ರಸ್ತೆ ಅಗೆಯುತ್ತವೆ. ಈ ರೀತಿ ಅನೇಕ ಬಾರಿ ಭರವಸೆ ಕೊಡಲಾಗಿದೆ. ಆದರೂ ಯಾವುದೇ ಪ್ರಯೋಜನ ಆಗಲ್ಲ. ಜನನಿಬಿಡ ಪ್ರದೇಶಗಳಲ್ಲೇ ಇಂತಹ ಸಮಸ್ಯೆಗಳೇ ಹೆಚ್ಚು.

● ಬಸವರಾಜು, ಉದ್ಯೋಗಿ

ಪ್ರಜಾವಾಣಿ 18/2/14

# ರಸಗೊಬ್ಬರ, ಇಂಧನ, ಆಹಾರ ಸಬ್ಸಿಡಿ ಹೆಚ್ಚಳ



ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಇಂಧನ, ಆಹಾರ ಹಾಗೂ ರಸಗೊಬ್ಬರಗಳ ಮೇಲಿನ ಒಟ್ಟು ಸಬ್ಸಿಡಿಯನ್ನು ₹2.46ಕೋಟಿಗೂ ಮೇಲ್ಪಟ್ಟು ಹೆಚ್ಚಿಸಲಾಗಿದೆ.

ಮುಖ್ಯವಾಗಿ ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ ಜಾರಿ ಉದ್ದೇಶದಿಂದ ಆಹಾರ ಸಬ್ಸಿಡಿಯನ್ನು ಈಗಿರುವ ₹23,000 ಕೋಟಿಯಿಂದ ₹1,15,000 ಕೋಟಿಗೆ ಏರಿಸಲಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಆಹಾರ, ಪೆಟ್ರೋಲಿಯಂ ಹಾಗೂ ರಸಗೊಬ್ಬರಗಳ ಮೇಲಿನ ಸಬ್ಸಿಡಿ ಮೊತ್ತ ಅಂದಾಜು ₹ 2,46,397 ಕೋಟಿ. 2013–14ನೇ ಸಾಲಿನಲ್ಲಿ ಈ ಮೊತ್ತ ₹2,45,452 ಕೋಟಿ ಇತ್ತು.

ಯೋಜನೇತರ ವೆಚ್ಚ ₹12,07,892 ಕೋಟಿ. ಈ ಮೊತ್ತದಲ್ಲಿ ಆಹಾರ, ರಸಗೊಬ್ಬರ ಹಾಗೂ ಇಂಧನ ಸಬ್ಸಿಡಿ ಮೇಲಿನ ವೆಚ್ಚ ₹ 2,46,397 ಕೋಟಿ. ಹಿಂದಿನ ಹಣಕಾಸು ವರ್ಷದಲ್ಲಿ ಈ ಪ್ರಮಾಣ ₹ 2,45,452 ಕೋಟಿ ಇತ್ತು.

ಇಂಧನ ಸಬ್ಸಿಡಿಗೆ ₹ 65,000 ಕೋಟಿ ಬಿಡುಗಡೆ ಮಾಡಲಾಗಿದೆ. ಆಹಾರ ಭದ್ರತೆ ಕಾಯ್ದೆ ಜಾರಿಗೆ ₹ 1,15,000 ಕೋಟಿ ಮೀಸಲಿಡಲಾಗಿದೆ.